KARAVALI SUDDI PRGI No. KARBIL/2015/62120 Posted on Every Saturday @ Mangaluru RMS. Vol: 12 Issue: 12 DAKSHINA KANNADA 10-16 AUGUST 2026 Page: 6

## ಬಸವನ ಹುಳು ಕಾಟವೇ? ಹೀಗೆ ಸುಲಭವಾಗಿ ದೂರವಿಡಿ!

ಮನೆ ತೋಟದಲ್ಲಿ ಬೆಳೆಸುವ ಹೂವಿನ ಗಿಡಗಳು ಹಾಗೂ ತರಕಾರಿ ಸಸಿಗಳು ಚೆನ್ನಾಗಿ ಬೆಳೆಯುತ್ತಿದ್ದರೂ, ಒಂದು ರಾತ್ರಿಯಲ್ಲೇ ಎಲೆಗಳು ರಂಧ್ರಗಳಾಗಿ ಅಥವಾ ಸಂಪೂರ್ಣವಾಗಿ ತಿನ್ನಲ್ಪಟ್ಟಿರುವುದನ್ನು ಹಲವರು ಗಮನಿಸಿರುತ್ತಾರೆ. ಹಗಲಿನಲ್ಲಿ ಯಾವುದೇ ಕೀಟಗಳು ಕಾಣಿಸದಿದ್ದರೂ, ರಾತ್ರಿಯಾಗುತ್ತಿದ್ದಂತೆ ಬಸವನ ಹುಳುಗಳು, ಗೊಂಡೆಹುಳುಗಳು ಹಾಗೂ ಇತರ ಕೀಟಗಳು ಸಸ್ಯಗಳ ಮೇಲೆ ದಾಳಿ ಮಾಡಿ ಎಲೆ, ಮೊಗ್ಗು ಮತ್ತು ಮೃದುವಾದ ಕಾಂಡಗಳನ್ನು ತಿಂದು ಸಸ್ಯದ ಬೆಳವಣಿಗೆಗೆ ಹಾನಿ ಉಂಟುಮಾಡುತ್ತವೆ. ಬಸವನ ಹುಳುಗಳು ಹೆಚ್ಚಾಗಿ ತೇವಾಂಶ ಇರುವ ಸ್ಥಳಗಳಲ್ಲಿ ಅಡಗಿಕೊಂಡು ರಾತ್ರಿ ವೇಳೆಯಲ್ಲಿ ಮಾತ್ರ ಹೊರಬರುತ್ತವೆ. ವಿಶೇಷವಾಗಿ ಕುಂಡಗಳಲ್ಲಿ ಬೆಳೆಸಿದ ಗಿಡಗಳು, ಹೂ ಬಿಡುವ ಹಂತದಲ್ಲಿರುವ ಸಸ್ಯಗಳು ಹಾಗೂ ಹೊಸದಾಗಿ ಮೂಡಿದ ಎಲೆಗಳು ಇವುಗಳ ಪ್ರಮುಖ ಆಹಾರವಾಗಿರುತ್ತವೆ. ಇದರಿಂದ ಸಸ್ಯದ ಬೆಳವಣಿಗೆ ಕುಂಠಿತವಾಗುವುದರ ಜೊತೆಗೆ ಹೂವು ಮತ್ತು ಫಲದ ಉತ್ಪಾದನೆಯೂ ಕಡಿಮೆಯಾಗಬಹುದು. ಈ ಸಮಸ್ಯೆಗೆ ಮನೆಯಲ್ಲೇ ಸುಲಭವಾಗಿ ಬಳಸಬಹುದಾದ ಒಂದು ವಿಧಾನವೆಂದರೆ ಬೇ ಎಲೆ (ಪುಲಾವ್ ಎಲೆ) ಬಳಕೆ. ಮೂರು ಅಥವಾ ನಾಲ್ಕು ಬೇ ಎಲೆಗಳನ್ನು ನೀರಿನಲ್ಲಿ ಚೆನ್ನಾಗಿ ಕುದಿಸಿ ತಣ್ಣಗಾದ ಬಳಿಕ ಅದನ್ನು ಒಂದು ಲೀಟರ್ ನೀರಿಗೆ ಬೆರೆಸಿ ಸ್ಪ್ರೇ ಬಾಟಲಿಯಲ್ಲಿ ತುಂಬಿ ಸಂಜೆ ವೇಳೆಯಲ್ಲಿ ಸಸ್ಯದ ಎಲೆಗಳ ಮೇಲೆ ಸಿಂಪಡಿಸಬಹುದು. ಬೇ ಎಲೆಯ ನೈಸರ್ಗಿಕ ಪರಿಮಳ ಮತ್ತು ಅದರಲ್ಲಿರುವ ಕೆಲವು ಸಂಯುಕ್ತಗಳು ಬಸವನ ಹುಳು ಸೇರಿದಂತೆ ಕೆಲವು ಕೀಟಗಳನ್ನು ದೂರವಿಡಲು ನೆರವಾಗಬಹುದು.



ಎಲೆಗಳಷ್ಟೇ ಅಲ್ಲ, ಮಣ್ಣಿನ ಸ್ವಚ್ಛತೆಯೂ ಅಷ್ಟೇ ಮುಖ್ಯ. ಒಣಗಿದ ಬೇ ಎಲೆಗಳನ್ನು ಸಣ್ಣ ತುಂಡುಗಳಾಗಿ ಪುಡಿಮಾಡಿ ಗಿಡದ ಸುತ್ತಲಿನ ಮಣ್ಣಿನಲ್ಲಿ ಹಾಕುವುದರಿಂದ ಕೆಲವು ಕೀಟಗಳ ಕಾಟ ಕಡಿಮೆಯಾಗಲು ಸಹಕಾರಿಯಾಗಬಹುದು. ಜೊತೆಗೆ ಮಣ್ಣಿನಲ್ಲಿ ತೇವಾಂಶ ಹೆಚ್ಚಾಗಿ ನಿಲ್ಲದಂತೆ ನೋಡಿಕೊಳ್ಳುವುದು ಬಸವನ ಹುಳುಗಳ ಸಂಖ್ಯೆಯನ್ನು ನಿಯಂತ್ರಿಸಲು ಸಹಾಯಕವಾಗಿದೆ. ತೋಟಗಾರಿಕಾ ತಜ್ಞರು ಬೇವಿನ ಎಣ್ಣೆಯ ಬಳಕೆಯನ್ನೂ ಪರಿಣಾಮಕಾರಿ ನೈಸರ್ಗಿಕ ವಿಧಾನವೆಂದು ಶಿಫಾರಸು ಮಾಡುತ್ತಾರೆ. ಒಂದು ಲೀಟರ್ ನೀರಿಗೆ 5ರಿಂದ 10 ಮಿಲಿ ಬೇವಿನ ಎಣ್ಣೆ ಹಾಗೂ ಕೆಲವು ಹನಿ ದ್ರವ ಸೋಪು ಬೆರೆಸಿ ಸಸ್ಯದ ಎಲೆಗಳ ಮೇಲೆ ಸಿಂಪಡಿಸಿದರೆ ಅನೇಕ ರೀತಿಯ ಕೀಟಗಳು ಸಸ್ಯದಿಂದ ದೂರವಿರುತ್ತವೆ. ಸಂಜೆ ವೇಳೆ ಈ ದ್ರಾವಣವನ್ನು ಬಳಸಿದರೆ ಉತ್ತಮ ಫಲಿತಾಂಶ ದೊರೆಯುವ ಸಾಧ್ಯತೆ ಹೆಚ್ಚು.

ಬಸವನ ಹುಳುಗಳು ಹಗಲಿನಲ್ಲಿ ಎಲೆಗಳ ಕೆಳಭಾಗ, ಕುಂಡದ ಅಂಚು ಅಥವಾ ತೇವಾಂಶವಿರುವ ಸ್ಥಳಗಳಲ್ಲಿ ಅಡಗಿಕೊಂಡಿರುತ್ತವೆ. ಆದ್ದರಿಂದ ವಾರದಲ್ಲಿ ಎರಡು ಅಥವಾ ಮೂರು ಬಾರಿ ರಾತ್ರಿ ವೇಳೆಯಲ್ಲಿ ಟಾರ್ಚ್ ಹಿಡಿದು ಸಸ್ಯಗಳನ್ನು ಪರಿಶೀಲಿಸುವುದು ಉತ್ತಮ. ದೊಡ್ಡ ಬಸವನ ಹುಳುಗಳು ಕಂಡುಬಂದರೆ ಅವುಗಳನ್ನು ಕೈಯಿಂದ ತೆಗೆದುಹಾಕುವುದರಿಂದ ಅವುಗಳ ಸಂಖ್ಯೆಯನ್ನು ಪರಿಣಾಮಕಾರಿಯಾಗಿ ಕಡಿಮೆ ಮಾಡಬಹುದು. ಸಸ್ಯಗಳ ಸುತ್ತಲೂ ಒಣ ಎಲೆಗಳು, ಕಸ ಅಥವಾ ಅನಗತ್ಯ ತೇವಾಂಶ ಜಮೆಯಾಗದಂತೆ ನೋಡಿಕೊಳ್ಳುವುದು ಕೂಡ ಕೀಟಗಳ ಕಾಟವನ್ನು ತಗ್ಗಿಸುತ್ತದೆ. ನಿಯಮಿತವಾಗಿ ಸಸ್ಯಗಳನ್ನು ಪರಿಶೀಲಿಸಿ ಆರಂಭದಲ್ಲೇ ಸೂಕ್ತ ಕ್ರಮ ಕೈಗೊಂಡರೆ ಬಸವನ ಹುಳುಗಳ ಹಾವಳಿಯನ್ನು ಸುಲಭವಾಗಿ ನಿಯಂತ್ರಿಸಬಹುದು. ರಾಸಾಯನಿಕ ಕೀಟನಾಶಕಗಳನ್ನು ಬಳಸುವ ಮುನ್ನ ಇಂತಹ ನೈಸರ್ಗಿಕ ವಿಧಾನಗಳನ್ನು ಪ್ರಯತ್ನಿಸುವುದು ಪರಿಸರ ಸ್ನೇಹಿಯಾಗಿರುವುದರ ಜೊತೆಗೆ ಮನೆ ತೋಟದ ಸಸ್ಯಗಳ ಆರೋಗ್ಯಕ್ಕೂ ಸುರಕ್ಷಿತವಾಗಿದೆ. ಸರಿಯಾದ ಆರೈಕೆ, ನಿಯಮಿತ ಪರಿಶೀಲನೆ ಹಾಗೂ ಸರಳ ಮನೆಮದ್ದುಗಳ ಸಹಾಯದಿಂದ ನಿಮ್ಮ ಮನೆ ತೋಟವನ್ನು ಬಸವನ ಹುಳುಗಳ ಕಾಟದಿಂದ ರಕ್ಷಿಸಿ, ಹಚ್ಚಹಸಿರಾಗಿರಿಸಬಹುದು.

## ಕಣ್ಣಿನ ಸುತ್ತ ಕಪ್ಪು ವರ್ತುಲ - ಫ್ಯಾಟಿ ಲಿವರ್‌ನ ಎಚ್ಚರಿಕೆ ಇರಬಹುದು!



ಇತ್ತೀಚಿನ ದಿನಗಳಲ್ಲಿ ಬದಲಾಗುತ್ತಿರುವ ಜೀವನಶೈಲಿ, ಅನಾರೋಗ್ಯಕರ ಆಹಾರ ಪದ್ಧತಿ ಹಾಗೂ ವ್ಯಾಯಾಮದ ಕೊರತೆಯಿಂದ ಫ್ಯಾಟಿ ಲಿವರ್ ಸಮಸ್ಯೆ ಹೆಚ್ಚಾಗುತ್ತಿದೆ. ಈ ಕಾಯಿಲೆ ಕೇವಲ ಮದ್ಯಪಾನ ಮಾಡುವವರಲ್ಲದೆ, ಮದ್ಯಪಾನ ಮಾಡದವರಲ್ಲಿಯೂ ಕಾಣಿಸಿಕೊಳ್ಳುತ್ತಿರುವುದು ವೈದ್ಯರ ಕಳವಳಕ್ಕೆ ಕಾರಣವಾಗಿದೆ. ಆರೋಗ್ಯ ತಜ್ಞರ ಪ್ರಕಾರ, ಫ್ಯಾಟಿ ಲಿವರ್‌ನ ಕೆಲವು ಆರಂಭಿಕ ಲಕ್ಷಣಗಳು ಮುಖದಲ್ಲೇ ಗೋಚರಿಸಬಹುದು. ವಿಶೇಷವಾಗಿ ಕಣ್ಣುಗಳ ಸುತ್ತ ಕಪ್ಪು ವರ್ತುಲಗಳು (ಡಾರ್ಕ್ ಸರ್ಕಲ್), ಸಾಕಷ್ಟು ನಿದ್ರೆ ಮಾಡಿದರೂ ಕಡಿಮೆಯಾಗದಿದ್ದರೆ ಅದು ಲಿವರ್ ಕಾರ್ಯಕ್ಷಮತೆ ಕುಂದಿರುವ ಸಂಕೇತವಾಗಿರಬಹುದು. ಲಿವರ್ ದೇಹದಲ್ಲಿನ ವಿಷಕಾರಿ ಅಂಶಗಳನ್ನು ಹೊರಹಾಕುವ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸದಾಗ ರಕ್ತಸಂಚಾರಕ್ಕೂ ಪರಿಣಾಮ ಬಿದ್ದು ಈ ಲಕ್ಷಣ ಕಾಣಿಸಬಹುದು. ಇದರ ಜೊತೆಗೆ ಕೆನ್ನೆಗಳ ಮೇಲೆ ಕೆಂಪು ಚುಕ್ಕೆಗಳು, ಮುಖದಲ್ಲಿ ಊತ, ಚರ್ಮದಲ್ಲಿ ತುರಿಕೆ, ಮೊಡವೆಗಳು ಹಾಗೂ ಚರ್ಮ ಹಳದಿ ಬಣ್ಣಕ್ಕೆ ತಿರುಗುವ ಕಾಮಾಲೆಯಂತಹ ಲಕ್ಷಣಗಳೂ ಫ್ಯಾಟಿ ಲಿವರ್‌ನ ಸೂಚನೆಗಳಾಗಿರಬಹುದು ಎಂದು ತಜ್ಞರು ತಿಳಿಸಿದ್ದಾರೆ.

ಇಂತಹ ಲಕ್ಷಣಗಳು ನಿರಂತರವಾಗಿ ಕಂಡುಬಂದರೆ ನಿರ್ಲಕ್ಷ್ಯ ಮಾಡದೆ ತಕ್ಷಣ ವೈದ್ಯರನ್ನು ಸಂಪರ್ಕಿಸಿ ಅಗತ್ಯ ಪರೀಕ್ಷೆ ಮಾಡಿಸಿಕೊಳ್ಳುವುದು ಸೂಕ್ತ. ಸಮತೋಲನ ಆಹಾರ, ನಿಯಮಿತ ವ್ಯಾಯಾಮ, ತೂಕ ನಿಯಂತ್ರಣ ಹಾಗೂ ಆರೋಗ್ಯಕರ ಜೀವನಶೈಲಿಯ ಮೂಲಕ ಫ್ಯಾಟಿ ಲಿವರ್ ಸಮಸ್ಯೆಯನ್ನು ತಡೆಗಟ್ಟಬಹುದು ಎಂದು ಆರೋಗ್ಯ ತಜ್ಞರು ಸಲಹೆ ನೀಡಿದ್ದಾರೆ.

## ಸ್ನೇಹಿತರ ಕೊರತೆ

ಈಗ ಜಗತ್ತನ್ನು ಕಾಡುತ್ತಿರುವ ಅತಿದೊಡ್ಡ ಸಮಸ್ಯೆಗಳಲ್ಲಿ ಒಂದು 'ಸ್ನೇಹಿತರ ಕೊರತೆ' ನಂಬಲು ಕಷ್ಟವಾದರೂ ಇದು ನಿಜ

ಅಂಕಿಅಂಶಗಳು ಏನು ಹೇಳುತ್ತವೆ?

1960 ರಲ್ಲಿ ಒಬ್ಬ ವ್ಯಕ್ತಿಗೆ ಸರಾಸರಿ 100 ಆಪ್ತ ಸ್ನೇಹಿತರಿದ್ದರು. 1990 ರ ಹೊತ್ತಿಗೆ ಆ ಸಂಖ್ಯೆ 50 ಕ್ಕೆ ಇಳಿಯಿತು. 2020 ರ ಹೊತ್ತಿಗೆ ಅದು ಕೇವಲ 10 ಕ್ಕೆ ತಲುಪಿತು.

ಇನ್ನು ಈಗ? ಒಬ್ಬ ನಿಜವಾದ ಸ್ನೇಹಿತ ಸಿಗುವುದೇ ಕಷ್ಟವಾಗಿದೆ. ಇತ್ತೀಚಿನ ಸಮೀಕ್ಷೆಯ ಪ್ರಕಾರ ನಮ್ಮ ದೇಶದಲ್ಲಿ 12% ಜನರಿಗೆ ಹೇಳಿಕೊಳ್ಳುವಂತಹ ಸ್ನೇಹಿತರೇ ಇಲ್ಲವಂತೆ.



ಒಂದು ಕಾಲದಲ್ಲಿ ದಿನಕ್ಕೆ ಕನಿಷ್ಠ ಒಂದು ಗಂಟೆ ಸ್ನೇಹಿತರೊಂದಿಗೆ ಮುಖಾಮುಖಿಯಾಗಿ ಕಳೆಯುತ್ತಿದ್ದೆವು. ಈಗ ಅದು 35 ನಿಮಿಷಗಳಿಗೆ ಸೀಮಿತವಾಗಿದೆ. ಸ್ಕ್ರೀನ್ ಮುಂದೆ ಕಳೆಯುವ ಸಮಯ ಹೆಚ್ಚಾಯಿತು, ಮನಸ್ಸು ಬಿಚ್ಚಿ ಮಾತನಾಡುವ ಜನರ ಸಂಖ್ಯೆ ಕಡಿಮೆಯಾಯಿತು.

**ಸ್ನೇಹ = ಜೀವನಕ್ಕೆ ಇನ್ಶೂರೆನ್ಸ್.**

ಒಳ್ಳೆಯ ಸ್ನೇಹಿತರು ನಿಜವಾಗಿಯೂ 'ಲೈಫ್ ಇನ್ಶೂರೆನ್ಸ್' ಇದ್ದಂತೆ. ಏಕೆಂದರೆ:

1. **ಆರೋಗ್ಯಕ್ಕೆ ಒಳ್ಳೆಯದು:** ಸ್ನೇಹಿತರಿಲ್ಲದ ಏಕಾಂಗಿತನ ದಿನಕ್ಕೆ 20 ಸಿಗರೇಟ್ ಸೇದಿದಷ್ಟೇ ಅಪಾಯಕಾರಿ ಎಂದು ಸಂಶೋಧನೆಗಳು ಹೇಳುತ್ತವೆ. ಒತ್ತಡ, ಡಿಪ್ರೆಶನ್ ಅವರನ್ನು ಆವರಿಸುತ್ತದೆ.

2. **ಹೃದಯಕ್ಕೆ ಭರವಸೆ:** ಒಳ್ಳೆಯ ಸ್ನೇಹಿತರಿರುವವರಲ್ಲಿ ರಕ್ತದೊತ್ತಡ, ಹೃದ್ರೋಗಗಳು ತುಂಬಾ ಕಡಿಮೆ ಬರುತ್ತವೆ.

3. **ಚಟುವಟಿಕೆಯ ಜೀವನ:** ಸ್ನೇಹಿತರ ಜೊತೆಯಿದ್ದರೆ ಖುಷಿಯಾಗಿರುತ್ತದೆ. ಒಟ್ಟಿಗೆ ವ್ಯಾಯಾಮ ಮಾಡುವುದು, ಆಟವಾಡುವುದು, ಹೊಸ ಕೆಲಸಗಳನ್ನು ಶುರುಮಾಡುವುದು ಸುಲಭವಾಗುತ್ತದೆ. ಅವರ ಒಡನಾಟ ನಮ್ಮಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.

**ಸ್ನೇಹ ಎಂದರೆ ಇನ್‌ಸ್ಟಂಟ್ ನೂಡಲ್ಸ್ ಅಲ್ಲ.**

ಸ್ನೇಹ ಸುಮ್ಮನೆ ಹುಟ್ಟುವುದಿಲ್ಲ. ಅದಕ್ಕೆ 'ಸಮಯ' ಎಂಬ ಅತಿದೊಡ್ಡ ಹೂಡಿಕೆ ಬೇಕು. ಮನಶಾಸ್ತ್ರಜ್ಞರ ಲೆಕ್ಕದ ಪ್ರಕಾರ, ಒಬ್ಬ ವ್ಯಕ್ತಿಯೊಂದಿಗೆ ಕನಿಷ್ಠ ಪರಿಚಯವಾಗಲು 40 ಗಂಟೆಗಳು ಒಟ್ಟಿಗೆ ಕಳೆಯಬೇಕು. ಅದು ಒಂದು ರೀತಿಯ ಸ್ನೇಹವಾಗಲು ಇನ್ನೂ 90 ಗಂಟೆಗಳು ಬೇಕು. 'ಪ್ರಾಣ ಸ್ನೇಹಿತ' ಎಂಬ ಹಂತಕ್ಕೆ ತಲುಪಲು ಇನ್ನೂ 40 ಗಂಟೆಗಳು ಬೇಕು. ಒಟ್ಟು ಸುಮಾರು 170 ಗಂಟೆಗಳು! ಈ ಓಟದ ಜೀವನದಲ್ಲಿ ನಮ್ಮ ಬಳಿ ಅಷ್ಟು ಸಮಯ ಇದೆಯಾ? ಒಮ್ಮೆ ಒಳ್ಳೆಯ ಸ್ನೇಹ ಬೆಳೆದ ನಂತರ ಅದನ್ನು ಉಳಿಸಿಕೊಳ್ಳಲು ಕೂಡ ಪ್ರತಿದಿನ ಸ್ವಲ್ಪ ಸಮಯ ಮೀಸಲಿಡಬೇಕು. ಗಿಡಕ್ಕೆ ನೀರು ಹಾಕಿದಂತೆ, ಸ್ನೇಹಕ್ಕೂ 'ಮಾತುಗಳು' ಎಂಬ ನೀರು ಬೇಕು.

**ಇದು ಸ್ನೇಹವೇ? ಒಮ್ಮೆ ಯೋಚಿಸಿ:**

1. **ಆಫೀಸ್ ಸ್ನೇಹಗಳು:** ನಾವು 'ಸ್ನೇಹ' ಎಂದು ಭಾವಿಸುವುದು ಬಹಳಷ್ಟು ಅವಶ್ಯಕತೆಗಳವರೆಗೆ, ಬಾಹ್ಯ ಶುಭಾಶಯಗಳೇ.

2. **ಸೋಶಿಯಲ್ ಮೀಡಿಯಾ ಸ್ನೇಹಗಳು:** ಫೇಸ್‌ಬುಕ್‌ನಲ್ಲಿ 5000 ಫ್ರೆಂಡ್ಸ್, ವಾಟ್ಸಾಪ್‌ನಲ್ಲಿ 100 ಗ್ರೂಪ್‌ಗಳಿದ್ದರೂ, ಆಪತ್ತಿನಲ್ಲಿ ಸಹಾಯ ಮಾಡುವವರು ಒಬ್ಬರೂ ಇರುವುದಿಲ್ಲ. ಇವು ಬಹಳಷ್ಟು 'ಕಾಲಕ್ಷೇಪ; ಮಾತುಗಳೇ'

3. **ಬಾರ್ & ರೆಸ್ಟೋರೆಂಟ್ ಸ್ನೇಹಗಳು:** ಗ್ಲಾಸ್ ಖಾಲಿಯಾಗುವವರೆಗಿನ ಮಾತುಗಳು, ನಗುಗಳು. ಮಾದಕತೆ ಇಳಿದರೆ ಮನುಷ್ಯ ಮಾಯ.

**ಅಸಲಿ ಸಮಸ್ಯೆ ಎಲ್ಲಿದೆ?**

ಸ್ನೇಹದ ಬಂಧಗಳು ಏಕೆ ಕಡಿದುಕೊಳ್ಳುತ್ತಿವೆ ಎಂದರೆ ಕಾರಣಗಳು ಬಹಳಷ್ಟಿವೆ. ಟೆಕ್ನಾಲಜಿ, ನ್ಯೂಕ್ಲಿಯರ್ ಫ್ಯಾಮಿಲಿಗಳು, ಸ್ಪರ್ಧೆಯ ಜಗತ್ತು... ಆದರೆ ಎಲ್ಲಕ್ಕಿಂತ ದೊಡ್ಡ ಕಾರಣ ಒಂದೇ. 'ಸಮಯವಿಲ್ಲ ಮಿತ್ರ!' ಹಣ ಸಂಪಾದಿಸುವ ಯಂತ್ರಗಳಂತೆ ಆಗಿಬಿಟ್ಟಿದ್ದೇವೆ. ಬಂಧಗಳನ್ನು ಉಳಿಸಿಕೊಳ್ಳುವುದನ್ನು ಮರೆತಿದ್ದೇವೆ.

**ಈಗಲಾದರೂ ಎಚ್ಚರಗೊಳ್ಳಿ:**

1. **ಸಮಯ ಮೀಸಲಿಡಿ:** ದಿನದಲ್ಲಿ 15 ನಿಮಿಷವಾದರೂ ಸ್ನೇಹಿತರಿಗೆ ಫೋನ್ ಮಾಡಿ ಮಾತನಾಡಿ. ವಾರದಲ್ಲಿ ಒಮ್ಮೆಯಾದರೂ ಭೇಟಿಯಾಗಿ.

2. **ಕ್ವಾಲಿಟಿ ಟೈಮ್ ಕೊಡಿ:** ಭೇಟಿಯಾದಾಗ ಫೋನ್ ಪಕ್ಕದಲ್ಲಿಟ್ಟು ಮನಸಿಟ್ಟು ಮಾತನಾಡಿ.

3. **ಹೊಸ ಸ್ನೇಹಗಳನ್ನು ಸ್ವಾಗತಿಸಿ:** ವಾಕಿಂಗ್‌ಗೆ ಹೋದಾಗ, ಹೊಸ ಕ್ಲಾಸ್‌ಗೆ ಸೇರಿದಾಗ ಜನರೊಂದಿಗೆ ಮಾತು ಬೆಳೆಸಿ.

4. **ಇರುವ ಸ್ನೇಹಗಳನ್ನು ಕಾಪಾಡಿಕೊಳ್ಳಿ:** ಸಣ್ಣಪುಟ್ಟ ಮನಸ್ತಾಪಗಳಿಗೆ ಬೆಲೆಬಾಳುವ ಸ್ನೇಹವನ್ನು ಬಿಟ್ಟುಕೊಡಬೇಡಿ. 'ಸಾರಿ', 'ಥ್ಯಾಂಕ್ಸ್' ಹೇಳಲು ಹಿಂಜರಿಯಬೇಡಿ.

ನೆನಪಿರಲಿ, ಕೊನೆಯ ಉಸಿರಿನವರೆಗೂ ನಮ್ಮೊಂದಿಗೆ ನಡೆಯುವುದು ಬ್ಯಾಂಕ್ ಬ್ಯಾಲೆನ್ಸ್ ಅಲ್ಲ, ಒಳ್ಳೆಯ ಸ್ನೇಹಿತರು ಮಾತ್ರ. ಆದ್ದರಿಂದ ಇಂದಿನಿಂದಲೇ ಶುರುಮಾಡಿ. ನಿಮ್ಮ ಫೋನ್ ಕಾಂಟಾಕ್ಟ್ ಲಿಸ್ಟ್ ತಿರುಗಿಸಿ. ಬಹಳ ಕಾಲದಿಂದ ಮಾತನಾಡದ ಆ 'ಬೆಸ್ಟ್ ಫ್ರೆಂಡ್'ಗೆ ಒಂದು ಮೆಸೇಜ್ ಮಾಡಿ.

ಸ್ನೇಹವನ್ನು ಉಳಿಸಿಕೊಳ್ಳೋಣ. ನಮ್ಮನ್ನು ನಾವು ಕಾಪಾಡಿಕೊಳ್ಳೋಣ.

Friends forever



ಸಂಗ್ರಹ: ಶೋಭಾ ಶಾಸ್ತ್ರಿ, ಬೆಂಗಳೂರು

## ಅಡುಗೆಯಲ್ಲಿ ಬಿಸಿ ನೀರೇ ಯಾಕೆ? ಇಲ್ಲಿದೆ ನಿಜವಾದ ಕಾರಣ!



ಅನೇಕ ಮನೆಗಳಲ್ಲಿ ಅಮ್ಮ, ಅಜ್ಜಿ ಅಥವಾ ಅನುಭವಿ ಅಡುಗೆಗಾರರು ಸಾರು, ಗ್ರೇವಿ ಅಥವಾ ಮಾಂಸಾಹಾರ ತಯಾರಿಸುವ ವೇಳೆ ಹೆಚ್ಚುವರಿ ನೀರು ಬೇಕಾದಾಗ ತಣ್ಣೀರಿನ ಬದಲು ಮೊದಲೇ ಕುದಿಸಿ ಇಟ್ಟಿರುವ ಬಿಸಿ ನೀರನ್ನೇ ಬಳಸುತ್ತಾರೆ. ವರ್ಷಗಳಿಂದ ನಡೆದು ಬಂದಿರುವ ಈ ಪದ್ಧತಿ ಕೇವಲ ಸಂಪ್ರದಾಯವಲ್ಲ, ಅದರ ಹಿಂದೆ ಅಡುಗೆಯ ಗುಣಮಟ್ಟವನ್ನು ಕಾಪಾಡುವ ವೈಜ್ಞಾನಿಕ ಕಾರಣವೂ ಅಡಗಿದೆ. ಒಲೆಯ ಮೇಲೆ ಕುದಿಯುತ್ತಿರುವ ಆಹಾರಕ್ಕೆ ಏಕಾಏಕಿ ತಣ್ಣೀರು ಸೇರಿಸಿದಾಗ ಪಾತ್ರೆಯೊಳಗಿನ ಉಷ್ಣತೆಯು ತಕ್ಷಣವೇ ಕಡಿಮೆಯಾಗುತ್ತದೆ. ಇದರಿಂದ ಅಡುಗೆಯ ಉಷ್ಣತೆಯ ಸಮತೋಲನ ಹದಗೆಟ್ಟು ಪದಾರ್ಥವು ಸರಿಯಾಗಿ ಬೇಯುವ ಪ್ರಕ್ರಿಯೆ ನಿಧಾನಗೊಳ್ಳುತ್ತದೆ. ಕೆಲವೊಮ್ಮೆ ಆಹಾರದ ರುಚಿ, ಸಾಂದ್ರತೆ ಹಾಗೂ ಗುಣಮಟ್ಟದ ಮೇಲೂ ಇದರ ಪರಿಣಾಮ ಬೀರುತ್ತದೆ. ಬಿಸಿ ನೀರನ್ನು ಬಳಸುವುದರಿಂದ ಪಾತ್ರೆಯಲ್ಲಿನ ಉಷ್ಣತೆ ಸ್ಥಿರವಾಗಿದ್ದು, ಆಹಾರ ಸಮವಾಗಿ ಬೇಯಲು ಸಹಕಾರಿಯಾಗುತ್ತದೆ.

ವಿಶೇಷವಾಗಿ ಮಾಂಸಾಹಾರ, ಬೇಳೆಕಾಳು, ಸಾರು ಹಾಗೂ ಗ್ರೇವಿ ತಯಾರಿಸುವಾಗ ಬಿಸಿ ನೀರು ಬಳಸುವುದು ಹೆಚ್ಚು ಪ್ರಯೋಜನಕಾರಿ. ಕುದಿಯುತ್ತಿರುವ ಮಾಂಸಕ್ಕೆ ತಣ್ಣೀರು ಸೇರಿಸಿದರೆ ಮಾಂಸದ ತಂತುಗಳು ಏಕಾಏಕಿ ಸಂಕುಚಿತಗೊಂಡು ಗಟ್ಟಿಯಾಗುವ ಸಾಧ್ಯತೆ ಇರುತ್ತದೆ. ಇದರಿಂದ ಮಾಂಸವು ಮೃದುವಾಗಿರುವ ಬದಲು ಗಟ್ಟಿಯಾಗಿ ತಿನ್ನಲು ಕಷ್ಟವಾಗಬಹುದು. ಆದರೆ ಬಿಸಿ ನೀರನ್ನು ಸೇರಿಸಿದರೆ ಮಾಂಸದ ಮೃದುತ್ವ ಉಳಿಯುವುದರ ಜೊತೆಗೆ ಅದು ಸಮವಾಗಿ ಬೇಯಲು ಸಹಾಯವಾಗುತ್ತದೆ.

ಬೇಳೆ ಹಾಗೂ ಕಾಳುಗಳನ್ನು ಬೇಯಿಸುವಾಗಲೂ ಇದೇ ನಿಯಮ ಅನ್ವಯಿಸುತ್ತದೆ. ಬಿಸಿ ನೀರನ್ನು ಬಳಸುವುದರಿಂದ ಬೇಳೆ ಬೇಯುವ ಪ್ರಕ್ರಿಯೆ ನಿರಂತರವಾಗಿ ಮುಂದುವರಿದು ಬೇಯುವ ಸಮಯ ಕಡಿಮೆಯಾಗುತ್ತದೆ. ಇದರಿಂದ ಇಂಧನದ ಉಳಿತಾಯವಾಗುವುದರ ಜೊತೆಗೆ ಆಹಾರದ ರುಚಿ ಮತ್ತು ಪೌಷ್ಟಿಕ ಗುಣಗಳೂ ಉತ್ತಮವಾಗಿ ಉಳಿಯುತ್ತವೆ. ಅಡುಗೆ ತಜ್ಞರ ಪ್ರಕಾರ, ಅಡುಗೆಯಲ್ಲಿ ಉಷ್ಣತೆಯ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು ಅತ್ಯಂತ ಮುಖ್ಯ. ಅದಕ್ಕಾಗಿ ಮೊದಲೇ ಬಿಸಿ ನೀರನ್ನು ಸಿದ್ಧವಾಗಿಟ್ಟುಕೊಂಡು ಅಗತ್ಯವಿದ್ದಾಗ ಅದನ್ನೇ ಬಳಸುವುದು ಉತ್ತಮ ಅಭ್ಯಾಸ. ಈ ಸಣ್ಣ ಬದಲಾವಣೆ ಆಹಾರದ ರುಚಿ, ಬಣ್ಣ ಹಾಗೂ ಗುಣಮಟ್ಟವನ್ನು ಉತ್ತಮಗೊಳಿಸಲು ನೆರವಾಗುತ್ತದೆ.

ಆರೋಗ್ಯದ ದೃಷ್ಟಿಯಿಂದಲೂ ಕುದಿಸಿದ ಅಥವಾ ಬಿಸಿ ನೀರನ್ನು ಬಳಸುವುದು ಸುರಕ್ಷಿತವೆಂದು ಪರಿಗಣಿಸಲಾಗುತ್ತದೆ. ವಿಶೇಷವಾಗಿ ಮಳೆಗಾಲದಲ್ಲಿ ಶುದ್ಧವಾಗಿ ಕುದಿಸಿದ ನೀರನ್ನು ಅಡುಗೆಯಲ್ಲಿ ಬಳಸುವುದರಿಂದ ನೀರಿನ ಮೂಲಕ ಹರಡುವ ಕೆಲವು ಸೋಂಕುಗಳ ಅಪಾಯವನ್ನು ಕಡಿಮೆ ಮಾಡಬಹುದು. ತಲೆಮಾರುಗಳಿಂದ ನಮ್ಮ ಹಿರಿಯರು ಅನುಸರಿಸಿಕೊಂಡು ಬಂದಿರುವ ಈ ಸರಳ ಅಡುಗೆ ಪದ್ಧತಿಯ ಹಿಂದೆ ಉತ್ತಮ ರುಚಿ, ಸಮರ್ಪಕ ಬೇಯುವಿಕೆ ಹಾಗೂ ವೈಜ್ಞಾನಿಕ ಕಾರಣಗಳಿವೆ. ಆದ್ದರಿಂದ ಇನ್ನು ಮುಂದೆ ಅಡುಗೆ ಮಾಡುವಾಗ ಕುದಿಯುತ್ತಿರುವ ಪದಾರ್ಥಕ್ಕೆ ತಣ್ಣೀರಿನ ಬದಲು ಬಿಸಿ ನೀರನ್ನು ಸೇರಿಸುವ ಅಭ್ಯಾಸ ರೂಢಿಸಿಕೊಂಡರೆ, ಆಹಾರದ ರುಚಿ ಮತ್ತು ಗುಣಮಟ್ಟ ಎರಡನ್ನೂ ಇನ್ನಷ್ಟು ಉತ್ತಮಗೊಳಿಸಬಹುದು.

## ಏನಿದು? ಹಣ್ಣೋ, ತರಕಾರಿಯೋ?



ಕಳೆದ ವಾರ ಅನಿರೀಕ್ಷಿತವಾಗಿ ಉತ್ತರ ಕನ್ನಡ ಜಿಲ್ಲೆಯ ಕುಮಟಾಗೆ ಹೋಗಬೇಕಾಗಿ ಬಂತು. ಕುಮಟಾದ ರಥಬೀದಿಗಳಲ್ಲಿ ಬೆಳಗಿನ ಜಾವ ಗ್ರಾಮೀಣ ಭಾಗಗಳಿಂದ ಬರುವ ಮಹಿಳೆಯರು ತಮ್ಮಲ್ಲಿ ಬೆಳೆದ ತರಕಾರಿ, ಸೊಪ್ಪು, ಹಣ್ಣುಗಳನ್ನು ಮಾರಾಟಕ್ಕೆ ತರುತ್ತಾರೆ ಎಂದು ಕೇಳಿದ್ದೆ. ಈ ಬಾರಿ ಸಮಯದ ಅಭಾವ ಇದ್ದರೂ ಮಾರುಕಟ್ಟೆಗೆ ಒಂದು ಸುತ್ತು ಹಾಕಿ ಬರೋಣ ಎಂದು ಹೊರಟೆ. ಶಾಂತೇರಿ ಕಾಮಾಕ್ಷಿ ರಾಮನಾಥ ದೇಗುಲದ ಎದುರು ಬಹಳಷ್ಟು ಮಹಿಳೆಯರು ನೆರೆದಿದ್ದರು. ಪ್ರತಿಯೊಬ್ಬರ ಬಳಿ ತಮ್ಮಲ್ಲೇ ಬೆಳೆದ ದೀವಿ ಹಲಸು (Breadfruit), ಬೆಂಡೆಕಾಯಿ, ಕಣಿಲೆ (ಎಳೆ ಬಿದಿರು), ನಾನಾ ಬಗೆಯ ಸೊಪ್ಪುಗಳು, ಕಾಟು ಮಾವಿನ ಹಣ್ಣುಗಳು, ನಾನಾ ಬಗೆಯ ಹೂವು, ಹೂಮಾಲೆಗಳು ಇದ್ದವು.

ಇವುಗಳ ನಡುವೆ ನನಗೆ ಮಹಿಳೆಯೊಬ್ಬರು ಮಾರುತ್ತಿದ್ದ ಹಲಸಿನ ಕಾಯಿಯನ್ನೇ ಹೋಲುವ ಆಕಾರ ಹೊಂದಿದ್ದ ಕಾಯಿಗಳನ್ನು ಗಮನಿಸಿದೆ. ಆಕೆಯ ಬಳಿ ಆರು ಕಾಯಿಗಳು ಮಾತ್ರ ಇದ್ದವು. ಒಮ್ಮೆ ನೋಡುವಾಗ ವಿದೇಶಿ ಹಣ್ಣು ಡ್ಯುರಿಯನ್ ಹಾಗೆ ಕಂಡರೂ ಅದರ ಹಾಗೆ ಹೊರಮೈಯಲ್ಲಿ ಚೂಪಾದ ಮುಳ್ಳುಗಳಿಲ್ಲ, ಹೆಬ್ಬಲಸು ಹಾಗಿದ್ದರೂ ಬಣ್ಣದಲ್ಲಿ ಗಾಢ ಹಸಿರು, ಆಕಾರದಲ್ಲೂ ಸ್ವಲ್ಪ ದೊಡ್ಡದು. ಕುತೂಹಲದಿಂದ ಕೇಳಿದಾಗ ಆಕೆ ಅದರ ಹೆಸರು ಹೇಳಿದಳು ಆದರೆ ಸಂತೆಯ ಗದ್ದಲದಲ್ಲಿ ನನ್ನ ಕಿವಿಗೆ ಮುಟ್ಟಲೇ ಇಲ್ಲ. ಹಣ್ಣಾಗುತ್ತಾ ಕೇಳಿದರೆ ಇಲ್ಲ, ಪಲ್ಯಕ್ಕೆ ಉತ್ತಮ. ಚೆನ್ನಾಗಿರುತ್ತೆ ಅಂದಳು. ಏನಾದರಾಗಲಿ ನೋಡೇ ಬಿಡುವ ಅಂತ ಒಂದನ್ನು ಖರೀದಿಸಿದೆ. ಸುಮಾರು ಒಂದು ಕೆಜಿಯನ್ನು ಮೀರದ ತೂಕ. ಬೆಲೆ 80 ರೂ. ಸ್ವಲ್ಪ ದುಬಾರಿ ಅನಿಸಿದರೂ ಅಪರೂಪದ ಕಾಯಿ ಎಂದು ತೆಗೆದುಕೊಂಡು ಬಂದೆ. ಗಡಿಬಿಡಿಯಲ್ಲಿ ಅದರ ಹೆಸರು ಮತ್ತೊಮ್ಮೆ ಕೇಳಲು ಮರೆತೆ.

ಮನೆಗೆ ತಂದ ಬಳಿಕ ಅಮ್ಮ ಬಹಳ ಯೋಚನೆ ಮಾಡಿ ಅವರ ಸಂಬಂಧದಲ್ಲಿ ಒಬ್ಬರು ಕುಮಟಾದಲ್ಲಿದ್ದರು. ಅವರ ಬಳಿ ಕೇಳುವ ಹೇಳಿದರು. ಹಾಗೆ ಕೇಳಿದಾಗ ಅವರು ನೀರು ಗುಜ್ಜೆ (ಎಳೇ ಹಲಸಿನ ಕಾಯಿಗೆ ತುಳುವಿನ ಹೆಸರು) ಆಗಿರ ಬೇಕು ಅಂದರು. ಅದರಿಂದ ಪೋಡಿ, ಪಲ್ಯ, ಸುಕ್ಕ ಎಲ್ಲಾ ಮಾಡಬಹುದು. ಒಂದು ರೀತಿಯಲ್ಲಿ ದೀವಿ ಹಲಸು (ದೀಗುಜ್ಜೆ) ಹೇಗೆ ಬಳಸುತ್ತೀರೋ ಹಾಗೇ ಬಳಸ ಬಹುದು ಎಂದರು. ಕಡೆಗೆ ನಾನು ಗೂಗಲ್ ಬಾಬಾನ ಮೊರೆ ಹೋದೆ. ಇದು ಫಿಲಿಫೈನ್ಸ್ ಮೂಲದ ಸಸ್ಯ. ಇದಕ್ಕೆ ಕಾಮಾಂಸಿ (Kamansi) ಅಥವಾ ಬೀಜವಿರುವ ದೀವಿ ಹಲಸು (Seeded Breadfruit) ಎಂದು ಕರೆಯುತ್ತಾರೆ. ಕೆಲವರು 'ಗಾಳಿ ಹಲಸು' ಎಂದೂ ಕರೆಯುತ್ತಾರಂತೆ. ಪೋಡಿ ಮಾಡಿದಾಗ ತಿನ್ನಲು ರುಚಿಕರವಾಗಿಯೇ ಇತ್ತು. ಕುಮಟಾ ಕಡೆಗೆ ಹೋದಾಗ ಈ ಕಾಯಿ ಸಿಕ್ಕರೆ ಮರೆಯದೇ ತೆಗೆದುಕೊಂಡು ಪದಾರ್ಥ ಮಾಡಿ ಹೇಗಿದೆ ಎಂದು ತಿಳಿಸಿ. ಅಂದ ಹಾಗೆ ನಿಮ್ಮ ಕಡೆ ಈ 'ನೀರು ಗುಜ್ಜೆ'ಗೆ ಏನು ಹೇಳುತ್ತಾರೆ? ತಿಳಿಸಿ.



ಚಿತ್ರ - ಬರಹ: **ಅಶ್ವಿನ್ ಪದವಿನಂಗಡಿ**

ಚಿತ್ರ ಕೃಪೆ: ವಿಕಿಪೀಡಿಯಾ ಜಾಲತಾಣ

## ಮಳೆಗಾಲದಲ್ಲಿ ನೀರು ಕಡಿಮೆ ಕುಡಿಯುತ್ತೀರಾ? ಎಚ್ಚರ!



ಮಳೆಗಾಲದಲ್ಲಿ ವಾತಾವರಣ ತಂಪಾಗಿರುವುದರಿಂದ ಹೆಚ್ಚಿನವರಿಗೆ ಬಾಯಾರಿಕೆ ಕಡಿಮೆ ಆಗುತ್ತದೆ. ಇದರ ಪರಿಣಾಮವಾಗಿ ನೀರು ಕುಡಿಯುವ ಪ್ರಮಾಣವೂ ಸಹಜವಾಗಿಯೇ ಕಡಿಮೆಯಾಗುತ್ತದೆ. ಆದರೆ ಬಾಯಾರಿಕೆ ಇಲ್ಲದಿದ್ದರೂ ದೇಹಕ್ಕೆ ಬೇಕಾಗುವ ನೀರಿನ ಪ್ರಮಾಣದಲ್ಲಿ ಯಾವುದೇ ಇಳಿಕೆಯಾಗುವುದಿಲ್ಲ ಎಂದು ಆರೋಗ್ಯ ತಜ್ಞರು ಎಚ್ಚರಿಸಿದ್ದಾರೆ. ಸಾಕಷ್ಟು ನೀರು ಕುಡಿಯದಿದ್ದರೆ ಕಿಡ್ನಿ, ಜೀರ್ಣಾಂಗ, ಮೆದುಳು ಸೇರಿದಂತೆ ದೇಹದ ಹಲವು ಪ್ರಮುಖ ಅಂಗಗಳ ಕಾರ್ಯಕ್ಷಮತೆ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ದೇಹದಲ್ಲಿನ ವಿಷಕಾರಿ ಅಂಶಗಳನ್ನು ಹೊರಹಾಕುವಲ್ಲಿ ಕಿಡ್ನಿಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಈ ಕಾರ್ಯ ಸರಾಗವಾಗಿ ನಡೆಯಲು ಸಾಕಷ್ಟು ನೀರು ಅಗತ್ಯ. ನೀರಿನ ಕೊರತೆಯಾದರೆ ಮೂತ್ರದ ಸಾಂದ್ರತೆ ಹೆಚ್ಚಾಗಿ ಯೂರಿನರಿ ಟ್ರ್ಯಾಕ್ಟ್ ಇನ್‌ಫೆಕ್ಷನ್ (UTI), ಕಿಡ್ನಿಯಲ್ಲಿ ಕಲ್ಲುಗಳು ಹಾಗೂ ಇತರ ಮೂತ್ರಪಿಂಡದ ಸಮಸ್ಯೆಗಳ ಅಪಾಯ ಹೆಚ್ಚಾಗಬಹುದು. ಆದ್ದರಿಂದ ಮಳೆಗಾಲದಲ್ಲೂ ನಿಯಮಿತವಾಗಿ ನೀರು ಕುಡಿಯುವುದು ಅತ್ಯಗತ್ಯ.

ಮಳೆಗಾಲದಲ್ಲಿ ದೈಹಿಕ ಚಟುವಟಿಕೆ ಕಡಿಮೆಯಾಗುವುದು ಮತ್ತು ಆಹಾರ ಪದ್ಧತಿಯಲ್ಲಿ ಬದಲಾವಣೆ ಆಗುವುದರಿಂದ ಜೀರ್ಣಕ್ರಿಯೆ ಸಮಸ್ಯೆಗಳು ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಈ ಸಮಯದಲ್ಲಿ ನೀರು ಕಡಿಮೆ ಕುಡಿಯುವುದರಿಂದ ಮಲಬದ್ಧತೆ, ಹೊಟ್ಟೆ ಉಬ್ಬರ, ಅಜೀರ್ಣ ಹಾಗೂ ಅಸಿಡಿಟಿ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಸಾಕಷ್ಟು ನೀರು ಸೇವಿಸುವುದರಿಂದ ಜೀರ್ಣರಸಗಳ ಸಮತೋಲನ ಕಾಪಾಡಲ್ಪಟ್ಟು ಆಹಾರದಲ್ಲಿರುವ ಪೋಷಕಾಂಶಗಳು ಸರಿಯಾಗಿ ಹೀರಿಕೊಳ್ಳಲು ಸಹಾಯವಾಗುತ್ತದೆ.

ದೇಹದಲ್ಲಿ ನೀರಿನ ಪ್ರಮಾಣ ಕಡಿಮೆಯಾದಾಗ ನಿರ್ಜಲೀಕರಣ (ಡೀಹೈಡ್ರೇಷನ್) ಉಂಟಾಗಬಹುದು. ಆರಂಭದಲ್ಲಿ ಆಯಾಸ, ತಲೆನೋವು, ತಲೆಸುತ್ತು, ಬಾಯಿ ಒಣಗುವುದು, ಗಮನ ಕೇಂದ್ರೀಕರಿಸಲು ಕಷ್ಟವಾಗುವುದು ಹಾಗೂ ಸಿಟ್ಟು ಹೆಚ್ಚಾಗುವುದು ಮೊದಲಾದ ಲಕ್ಷಣಗಳು ಕಾಣಿಸಿಕೊಳ್ಳಬಹುದು. ಈ ಸಮಸ್ಯೆಯನ್ನು ನಿರ್ಲಕ್ಷಿಸಿದರೆ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇದೆ. ಮಕ್ಕಳು, ವಯೋವೃದ್ಧರು, ಗರ್ಭಿಣಿಯರು ಹಾಗೂ ದೀರ್ಘಕಾಲದ ಕಾಯಿಲೆಗಳಿಂದ ಬಳಲುತ್ತಿರುವವರು ಈ ವಿಷಯದಲ್ಲಿ ಹೆಚ್ಚು ಎಚ್ಚರಿಕೆ ವಹಿಸಬೇಕು ಎಂದು ವೈದ್ಯರು ಸಲಹೆ ನೀಡಿದ್ದಾರೆ. ಮಳೆಗಾಲದಲ್ಲಿ ಆರೋಗ್ಯ ಕಾಪಾಡಿಕೊಳ್ಳಲು ಬಾಯಾರಿಕೆ ಆಗುವವರೆಗೆ ಕಾಯದೆ ದಿನವಿಡೀ ಸ್ವಲ್ಪ ಸ್ವಲ್ಪ ಪ್ರಮಾಣದಲ್ಲಿ ನೀರು ಕುಡಿಯುವ ಅಭ್ಯಾಸ ರೂಢಿಸಿಕೊಳ್ಳಬೇಕು. ಸಾಮಾನ್ಯವಾಗಿ ಆರೋಗ್ಯವಂತ ವ್ಯಕ್ತಿಯೊಬ್ಬರು ದಿನಕ್ಕೆ 2ರಿಂದ 3 ಲೀಟರ್ ನೀರು ಕುಡಿಯುವುದು ಉತ್ತಮ. ಆದರೆ ದೇಹದ ತೂಕ, ವಯಸ್ಸು, ಹವಾಮಾನ ಹಾಗೂ ದೈಹಿಕ ಚಟುವಟಿಕೆಗೆ ಅನುಗುಣವಾಗಿ ಈ ಪ್ರಮಾಣದಲ್ಲಿ ವ್ಯತ್ಯಾಸ ಇರಬಹುದು.

ನೀರಿನ ಜೊತೆಗೆ ಎಳನೀರು, ಮನೆಯಲ್ಲೇ ತಯಾರಿಸಿದ ಸೂಪ್, ಮಜ್ಜಿಗೆ ಹಾಗೂ ನೀರಿನಂಶ ಅಧಿಕವಾಗಿರುವ ಕಲ್ಲಂಗಡಿ, ಕಿತ್ತಳೆ, ಪೇರಳೆ, ಸೌತೆಕಾಯಿ ಮೊದಲಾದ ಹಣ್ಣುಗಳನ್ನು ಆಹಾರದಲ್ಲಿ ಸೇರಿಸಿಕೊಳ್ಳುವುದರಿಂದ ದೇಹದಲ್ಲಿ ನೀರಿನ ಸಮತೋಲನ ಕಾಪಾಡಿಕೊಳ್ಳಲು ನೆರವಾಗುತ್ತದೆ. ಆದರೆ ಹೊರಗಡೆ ಸಿಗುವ ಅಶುದ್ಧ ಪಾನೀಯಗಳು ಅಥವಾ ಕುದಿಸದ ನೀರನ್ನು ಸೇವಿಸದಿರುವುದು ಉತ್ತಮ. ಮಳೆಗಾಲದಲ್ಲಿ ಬಾಯಾರಿಕೆ ಕಡಿಮೆ ಅನಿಸುವುದು ಸಹಜ. ಆದರೆ ಅದನ್ನು ನೀರಿನ ಅಗತ್ಯ ಕಡಿಮೆಯಾಗಿದೆ ಎಂದು ಭಾವಿಸುವುದು ತಪ್ಪು. ಕುದಿಸಿ ಆರಿಸಿದ ಅಥವಾ ಶುದ್ಧೀಕರಿಸಿದ ನೀರನ್ನು ನಿಯಮಿತವಾಗಿ ಕುಡಿಯುವುದರಿಂದ ಕಿಡ್ನಿ ಆರೋಗ್ಯ, ಉತ್ತಮ ಜೀರ್ಣಕ್ರಿಯೆ, ರೋಗನಿರೋಧಕ ಶಕ್ತಿ ಹಾಗೂ ದೇಹದ ಒಟ್ಟಾರೆ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಮಳೆಗಾಲದಲ್ಲೂ ಸಾಕಷ್ಟು ನೀರು ಕುಡಿಯುವ ಸಣ್ಣ ಅಭ್ಯಾಸವೇ ಹಲವು ಗಂಭೀರ ಆರೋಗ್ಯ ಸಮಸ್ಯೆಗಳಿಂದ ನಿಮ್ಮನ್ನು ರಕ್ಷಿಸಬಲ್ಲದು.

## Saint Aloysius University Celebrates Historic First Graduation Day




Saint Aloysius (Deemed to be University), Mangaluru, marked a historic milestone in its 146-year legacy by celebrating its First Graduation Day 2026, during which 801 students were conferred degrees. The ceremony also honoured 56 rank holders and one special prize winner for their outstanding academic achievements. The graduation ceremony was formally declared open by Rev. Dionysius Vaz SJ, Chancellor of the University and Provincial of the Karnataka Jesuit Province. The graduates took the solemn oath administered by Rev. Melwin Dcunha SJ, Pro-Vice Chancellor, before symbolically turning their tassels to mark the successful completion of their academic journey. The University Anthem was presented by the university choir.Delivering the graduation address, Chief Guest Prof. Dr C. Raj Kumar, Vice Chancellor of O.P. Jindal Global University, Haryana, congratulated the graduating students on becoming the first batch of graduates of the University. Emphasising that education is about building character as much as careers, he urged students to uphold integrity, compassion and social responsibility while using their knowledge to create a positive impact on society. Guest of Honour Prof. Miloš Lichner SJ, Vice Chancellor of Trnava University, Slovakia, reflected on the enduring legacy of Jesuit education and reminded graduates that true leadership is demonstrated through humility, responsibility and personal example rather than authority alone.In his presidential address, Rev. Dionysius Vaz SJ highlighted the core values of Jesuit education, including equity, empathy, discernment and justice. He expressed confidence that Saint Aloysius University would emerge as a globally recognised centre of academic excellence, innovation and leadership, while encouraging graduates to carry forward the values of generosity and humility throughout their lives.Vice Chancellor Rev. Dr Praveen Martis SJ welcomed the gathering and spoke about the importance of purposeful action and lifelong learning. Registrar Dr Ronald Nazareth presented the list of graduates and recognised the academic achievers. Rev. Brian Pereira SJ, Pro-Chancellor and Rector of Saint Aloysius Institutions, was also present and felicitated the recipient of the special prize. The programme concluded with a vote of thanks proposed by Dr Vaishali Rai, who acknowledged the contributions of the faculty, students and organising committee. The ceremony was compered by Dr Vidya Vinutha Dsouza and Vishal Nayak.

## MCC Bank Opens 23rd Branch at Katapadi




Reinforcing its commitment to expanding customer-focused cooperative banking services across Karnataka, MCC Bank Ltd. inaugurated its 23rd branch at Katapadi. The new branch is located on the ground floor of Global Residency Building, Old Post Office Road, Moodabettu, Katapadi. The branch was inaugurated by MCC Bank Chairman Anil Lobo. M.A. Abdul Gafoor, President of the Coastal Development Board, inaugurated the Safe Room, while Rev. Rajesh Prasanna, Parish Priest of Saint Vincent De Paul Church, Katapadi, blessed the new premises by lighting the ceremonial lamp. The inaugural function was presided over by Chairman Anil Lobo. Among those present were M. A. Abdul Gafoor, Rev. Akshay D. Amanna of CSI Christ Church, Prashanth Jathanna, Director of the Karnataka Christian Co-operative Credit Development Corporation (KCCDC), Geethanjali M. Suvarna, former Udupi Zilla Panchayat member, K. Satyendra Pai, Secretary of SVS Vidyavardhaka Sangha, Chartered Accountant CA Pritiesh Burton Dsa, Ismail Katapadi, General Secretary of the Muslim Federation, Udupi District, Vice Chairman Jerald Jude Dsilva, General Manager Sunil Menezes and Kaup MLA Gurme Suresh Shetty.In his presidential address, Anil Lobo said the Katapadi branch marks another milestone in MCC Bank's expansion journey and reflects the institution's commitment to customer-centric banking, transparent governance and sustainable growth. Thanking the people of Katapadi for their overwhelming support, he expressed confidence that the branch would achieve a business turnover of ₹10 crore within six months. Highlighting the Bank's growth, Lobo said MCC Bank has increased its overall business turnover from ₹500 crore to over ₹1,600 crore in the last eight years. He attributed this achievement to disciplined financial management, strict compliance with RBI guidelines, digital transformation, improved customer service and the dedication of the Board of Directors, management and staff. He also noted that six new branches have been opened during the present leadership, with most achieving business of nearly ₹10 crore within their first year.Chief Guest M.A. Abdul Gafoor congratulated MCC Bank on its remarkable progress and praised the institution for upholding the true spirit of the cooperative movement through transparent governance and people-friendly banking. Rev. Rajesh Prasanna described MCC Bank as "our own Bank" and appreciated its rapid growth, expressing confidence that it would emerge as one of Karnataka's leading cooperative banks. The other dignitaries, including Rev. Akshay D. Amanna, CA Pritiesh Burton Dsa, Prashanth Jathanna, Geethanjali M. Suvarna, K. Satyendra Pai and MLA Gurme Suresh Shetty, congratulated the Bank for its remarkable achievements and commended its disciplined administration, customer-oriented services and social commitment. As part of the inaugural celebrations, MCC Bank honoured meritorious students, academic rank holders, distinguished social contributors and leadership award recipients from the region. The Bank also extended financial assistance of ₹25,000 to Ravi Katapadi as part of its social responsibility initiatives. Customers who opened accounts on the inaugural day and individuals who contributed to the successful organisation of the programme were also felicitated. The function was attended by Directors Joseph Anil Patrao, David Dsouza, J. P. Rodrigues, Herold Monteiro, Elroy Kiran Crasto, Irene Rebello, Vincent Lasrado, Andrew Dsouza, Roshan Dsouza, Felix Dcruz and Sushanth Saldanha, along with a large gathering of customers and residents from Katapadi and neighbouring areas. The programme featured the Bank Anthem, a prayer song by the staff, and a documentary showcasing MCC Bank's growth and achievements. Dr Gerald Pinto, Director, welcomed the gathering, while Alwyn Danti compered the programme. Rev. Anil Dsouza, Parish Priest of Udyavara Church, was felicitated on his appointment as the Spiritual Director of Catholic Sabha (R.), Udupi Pradesh.

## Bharath Auto Cars Unveils All-New Maruti Suzuki Brezza in Mangaluru



Bharath Auto Cars, one of the region's leading Maruti Suzuki Arena dealerships, grandly launched the All-New Maruti Suzuki Brezza at its Kuntikan showroom on July 29. The stylish compact SUV is priced from ₹7.39 lakh (ex-showroom).The vehicle was ceremonially unveiled by Guests of Honour Anantha Padmanabha, Police Inspector, Kadri Police Station, and VJ Dixon, Worldwide Host, Anchor and Influencer, in the presence of customers, media representatives, automobile enthusiasts and invited guests.Welcoming the gathering, Sudhir M. Pai, Managing Director of Bharath Auto Cars, along with Denis Gonsalves, Senior Sales Manager, and Yashwanth, Showroom Manager, highlighted the significance of the All-New Brezza in Maruti Suzuki's SUV lineup and its commitment to offering customers advanced technology, enhanced safety and premium driving comfort. The All-New Brezza is available with a 1.5-litre naturally aspirated petrol engine and the new 1.0-litre Booster Jet turbo-petrol engine, producing 110 PS of power and 170 Nm of torque, paired with a 6-speed manual transmission. It also features an underbody-mounted S-CNG system with Idle Start-Stop (ISS) technology. The SUV comes equipped with a host of premium features, including front ventilated seats, Auto Purifier with PM 2.5 display, a 10.1-inch Smart Play Pro X infotainment system, Built-in Alexa Auto Voice AI, over 65 Suzuki Connect connected-car features, 64-colour ambient lighting, Blind Spot Warning, Lane Change Alert, Rear Cross Traffic Alert, Safe Exit Warning, and more than 30 advanced safety features. The vehicle has also earned a prestigious 5-Star Bharat NCAP Safety Rating. With a legacy of over 14 lakh satisfied customers across the country, the Maruti Suzuki Brezza continues to strengthen its position as one of India's most popular and trusted compact SUVs, offering an impressive blend of style, performance, technology and safety.

## NITK Launches Initiative to Drive Semiconductor Innovation



The National Institute of Technology Karnataka (NITK), Surathkal, hosted the Founding Conclave of the proposed Centre of Excellence for VLSI Innovation for Systems, Technology & Applications (C-VISTA) on August 3–4, marking a significant step towards strengthening semiconductor research, industry collaboration, and talent development in Coastal Karnataka. The two-day conclave brought together leading representatives from academia, industry, government, and NITK's global alumni network to chart a roadmap for building a vibrant semiconductor and deep-tech ecosystem.The event was led by NITK Director Prof. B. Ravi, with active participation from distinguished alumni and industry leaders, including Navin Bishnoi, Vice President and India Country Manager at Marvell Technology and Chairperson of IESA; Rohit Bhat, Founder of the Silicon Beach Program; and Padmanand Warrier, Founder of Warrier H.E.A.R.T. Hub for Sustainable AI. Senior NITK officials, including Deputy Director Prof. Subhash C. Yaragal, Dean (Research and Innovation) Prof. Udaya Bhat, and Dean (Alumni and Corporate Relations) Prof. Prasanna Belur, also attended.Designed to position NITK as a leading centre for semiconductor innovation, C-VISTA will foster collaboration among students, faculty, researchers, alumni, and industry professionals to develop practical VLSI and semiconductor-based solutions for real-world challenges. The initiative is expected to accelerate innovation, research, entrepreneurship, and skilled workforce development in the region. The conclave featured participation from several prominent organisations, including KarMic Design Pvt. Ltd., EKA Mobility, Karnataka Digital Economy Mission, Sierra Pinnacle, Anmaya Technologies Pvt. Ltd., Leanwatts India Pvt. Ltd., TiE Mangaluru, and the Silicon Beach Program, alongside NITK faculty members, research scholars, and students.Speaking on the occasion, Prof. Ravi said C-VISTA would serve as a collaborative platform where academia and industry can jointly address campus and societal challenges through semiconductor and VLSI technologies. A keynote masterclass by Navin Bishnoi highlighted India's growing opportunities across the semiconductor value chain, with a focus on chip design, systems innovation, talent development, and ecosystem creation. Technical sessions by industry experts Samarth Modi, Girish Desai, Gopal Krishna Nayak, and Ashish Guttedar further explored emerging trends and opportunities in the sector.A panel discussion moderated by Padmanand Warrier examined C-VISTA's three strategic focus areas—biomedical devices and healthcare, climate and disaster resilience, and drones, electric vehicles, and robotics. Interactive breakout sessions translated these discussions into actionable plans. The conclave concluded with the adoption of a 90-day execution roadmap, the identification of faculty and industry leaders for each focus area, and a timeline for launching programmes and forming student cohorts. The event was coordinated by the NITK Organising Committee led by Dr Rathnamala Rao (Convener), Dr Maisagalla Gopal (Co-Convener), Prof. Gangadharan, Dr Sowmya Kamath S., Dr Navin Karanth P., Dr Ravi Raushan, Prof. M.N. Satyanarayan, along with alumni members Padmanand Warrier and Navin Bishnoi.

## Truth is the Benchmark for Media - Dr Harsha Halahalli



Truth must remain the benchmark for media professionals if journalism is to retain credibility and public trust, said Dr Harsha Halahalli, Registrar of Nitte (Deemed to be University). He was speaking at the orientation programme for newly admitted students of the Nitte Institute of Communication. Highlighting the rapid growth of Artificial Intelligence and digital media, Dr Halahalli said that while information now reaches people instantly through social media, maintaining accuracy and credibility has become more important than ever. Global TV Chairman N.V. Paulose urged students to produce reliable and creative content and encouraged them to become effective storytellers. The programme also included sessions on campus facilities, student welfare, the POSH cell, sports, and examination procedures. Dr. Moulya Baladi, Head of the Institute, welcomed the gathering.

## Saint Agnes College PTA AGM Focuses on `Student Mental Health and Parent'-Teacher Partnership



The Annual General Meeting of the Parent Teacher Association (PTA) of Saint Agnes College (Autonomous), Mangaluru, for the academic year 2026–27 was held on July 30 in Room A4 of the Avila Block, with enthusiastic participation from the management, faculty, parents, and students. The meeting was presided over by Principal and PTA President Sr Dr M. Venissa A.C., in the presence of Sr Dr Marie Prem Dsouza A.C., Joint Secretary of Saint Agnes Institutions. PTA Vice President Francis Mendoza welcomed the gathering and introduced the chief guest. Delivering the keynote address, Dr Smitha Hegde, Principal and Director of Research at the Centre for Advanced Learning (CFAL), Mangaluru, spoke on "Children's Mental Health: The Shared Responsibility of Parents and Teachers." She emphasized that the emotional well-being of children depends on the combined efforts of parents and educators. Stressing the importance of open communication, she encouraged parents to understand their children's emotional needs, provide timely support, and create a nurturing environment that helps them grow into confident and resilient individuals.Addressing the gathering, Sr Dr Marie Prem Dsouza highlighted the vital role of parents in shaping the character and values of their children. She noted that true success extends beyond academic excellence and includes discipline, integrity, empathy, and strong moral values. She called for greater collaboration between parents and teachers in nurturing responsible citizens and compassionate individuals, while reaffirming the college's commitment to empowering students with knowledge, values, and opportunities for holistic development. PTA Treasurer Vineetha N.T. presented the Annual Report for the academic year 2025–26, highlighting the institution's academic achievements, co-curricular activities, student accomplishments, and key initiatives. She also presented the Income and Expenditure Statement for the financial year 2025–26, providing a transparent overview of the college's financial position. During the meeting, the PTA Executive Committee members for the academic year 2026–27 were nominated. The programme concluded with the Vote of Thanks proposed by PTA Joint Secretary Nitasha.

# ಮಂಗಳೂರು ಧರ್ಮಕ್ಷೇತ್ರದ ೨೦೨೬-೨೦೨೮ರ ಧರ್ಮಕ್ಷೇತ್ರದ ಪಾಲನಾ ಪರಿಷತ್ ರಚನೆ

## ಜೀಟಾ ಉಷಾ ಫೆರ್ನಾಂಡಿಸ್ ಕಾರ್ಯದರ್ಶಿ, ಆಲ್ವಿನ್ ಡಿಸೋಜ ಪಾನೀರ್ ಹಾಗೂ ಡೆನ್ನಿಸ್ ಡಿಸಿಲ್ವ ಕುಲ್ಶೇಕರ ಅವರು ಕ್ಯಾಥೊಲಿಕ್ ಕೌನ್ಸಿಲ್ ಆಫ್ ಕರ್ನಾಟಕ (CCK) ಪ್ರತಿನಿಧಿಗಳಾಗಿ ಆಯ್ಕೆ - 'ಪಾಸ್ಟೋರಲ್ ಪ್ಲ್ಯಾನ್ ೩.೦' ಅನುಷ್ಠಾನಕ್ಕೆ ಬಿಷಪ್ ಸಲ್ಡಾನ್ಹಾ ಕರೆ



ಮಂಗಳೂರು ಧರ್ಮಕ್ಷೇತ್ರದ 2026–2028ನೇ ಸಾಲಿನ ಧರ್ಮಕ್ಷೇತ್ರದ ಪಾಲನಾ ಪರಿಷತ್ (Diocesan Pastoral Parishad - DPP) ನೂತನ ಸಮಿತಿಯ ಉದ್ಘಾಟನಾ ಸಭೆಯು ಕೊಡ್ಯಾಲ್‌ಬೈಲಿನ ಬಿಷಪ್ಸ್ ಹೌಸ್ ಸಭಾಂಗಣದಲ್ಲಿ ನಡೆಯಿತು. ಮಂಗಳೂರು ಧರ್ಮಕ್ಷೇತ್ರದ ಧರ್ಮಾಧ್ಯಕ್ಷರಾದ ಪರಮ ಪೂಜ್ಯ ಅತೀ ವಂದನೀಯ ಡಾ. ಪೀಟರ್ ಪಾವ್ಲ್ ಸಲ್ಡಾನ್ಹಾ ಅವರು ಸಭೆಯ ಅಧ್ಯಕ್ಷತೆ ವಹಿಸಿ, ಹೊಸ ತ್ರೈವಾರ್ಷಿಕ ಅವಧಿಯ ಧ್ಯೇಯ–ದೃಷ್ಟಿಕೋನವನ್ನು ಮಂಡಿಸಿದರು. ಬೆಳಿಗ್ಗೆ 9.30ಕ್ಕೆ ಎಪಿಸ್ಕೋಪಲ್ ಸಿಟಿ ವಲಯದ ಪ್ರತಿನಿಧಿಗಳು ನಡೆಸಿದ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಬಳಿಕ ಧರ್ಮಾಧ್ಯಕ್ಷರು ಸಭಿಕರನ್ನು ಸ್ವಾಗತಿಸಿ, ನೂತನ ಪರಿಷತ್ ಸದಸ್ಯರನ್ನು ಪರಿಚಯಿಸಿದರು. ಧರ್ಮಕ್ಷೇತ್ರದ ಶ್ರೇಷ್ಠ ಗುರು ಫಾದರ್ ಮ್ಯಾಕ್ಸಿಮ್ ಎಲ್. ನೊರೊನ್ಹಾ ಕಳೆದ ಅವಧಿಯ ಕಾರ್ಯಚಟುವಟಿಕೆಗಳ ವರದಿ ಹಾಗೂ ಮುಂದಿನ ಪಾಸ್ಟೋರಲ್ ಯೋಜನೆಗಳನ್ನು ಮಂಡಿಸಿದರು. ಬಳಿಕ 2026–2028ನೇ ಅವಧಿಯ ವಿವಿಧ ಹುದ್ದೆಗಳಿಗೆ ಚುನಾವಣೆ ನಡೆಸಲಾಯಿತು.

**ಜೀಟಾ ಉಷಾ ಫೆರ್ನಾಂಡಿಸ್ ಕಾರ್ಯದರ್ಶಿ:** ಚುನಾವಣೆಯಲ್ಲಿ ಸಿಟಿ ವಲಯದ ಬೀಮಾರ್ಗರ್ ಚರ್ಚ್‌ನ ಜೀಟಾ ಉಷಾ ಫೆರ್ನಾಂಡಿಸ್ ಅವರು ಧರ್ಮಕ್ಷೇತ್ರದ ಪಾಲನಾ ಪರಿಷತ್ ಇದರ ಕಾರ್ಯದರ್ಶಿಯಾಗಿ ಬಹುಮತದಿಂದ ಆಯ್ಕೆಯಾದರು.

**ಕಾರ್ಯಕಾರಿ ಸಮಿತಿ (Executive Committee):** ಪುರುಷ ಪ್ರತಿನಿಧಿ: ಸಂತೋಷ್ ಡಿಕೋಸ್ತಾ (ಕೆಲರಾಯಿ ಚರ್ಚ್ ಸಿಟಿ ವಲಯ), ಮಹಿಳಾ ಪ್ರತಿನಿಧಿ: ಡಾ. ಫ್ರೀಡಾ ಫ್ಲಾವಿಯಾ ಡಿಸೋಜ (ಬಳ್ಕುಂಜೆ ಚರ್ಚ್, ಕಿರೆಂ ವಲಯ)

**ಕ್ಯಾಥೊಲಿಕ್ ಕೌನ್ಸಿಲ್ ಆಫ್ ಇಂಡಿಯಾ (CCI) ಪ್ರತಿನಿಧಿಗಳು:** ಸಂತೋಷ್ ಡಿಸೋಜ ಹಾಗೂ ಲಿನೆಟ್ ಫೆರ್ನಾಂಡಿಸ್.

**ಕ್ಯಾಥೊಲಿಕ್ ಕೌನ್ಸಿಲ್ ಆಫ್ ಕರ್ನಾಟಕ (CCK) ಪ್ರತಿನಿಧಿಗಳು:** ಅಲ್ವಿನ್ ಜೆರೊಮ್ ಡಿಸೋಜ ಪಾನೀರ್ ಹಾಗೂ ಡೆನಿಸ್ ಡಿಸಿಲ್ವಾ ಕುಲ್ಶೇಕರ.

**'ಪಾಸ್ಟೋರಲ್ ಪ್ಲಾನ್ ೩.೦' ಅನುಷ್ಠಾನಕ್ಕೆ ಒತ್ತು:** ಚುನಾವಣೆಯ ಬಳಿಕ ಸಿಬಿಸಿಐ ಲಿಟರ್ಜಿ ಆಯೋಗದ ಪ್ರತಿನಿಧಿ ವಂದನೀಯ ಡಾ. ರುಡಾಲ್ಫ್ ರಾಜ್ ಪಿಂಟೊ, ಓಸಿಡಿ, "2026–2028ರ ಸಿನೋದ್ ಅನುಷ್ಠಾನದ ಮಾರ್ಗಸೂಚಿಗಳು" ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಧರ್ಮಕ್ಷೇತ್ರ, ವಲಯ ಹಾಗೂ ಚರ್ಚ್ ಹಂತದಲ್ಲಿ ಸಿನೋಡಲ್ ಚಿಂತನೆಗಳನ್ನು ಕಾರ್ಯರೂಪಕ್ಕೆ ತರುವ ಮಾರ್ಗಸೂಚಿಗಳನ್ನು ಅವರು ವಿವರಿಸಿದರು. ಸಿನೋಡಲ್ ಚರ್ಚ್ ನಿರ್ಮಾಣಕ್ಕೆ ಬಿಷಪ್ ಕರೆ: ಅಧ್ಯಕ್ಷೀಯ ಭಾಷಣದಲ್ಲಿ ಧರ್ಮಾಧ್ಯಕ್ಷರಾದ ಪರಮ ಪೂಜ್ಯ ಅತೀ ವಂದನೀಯ ಡಾ. ಪೀಟರ್ ಪಾವ್ಲ್ ಸಲ್ಡಾನ್ಹಾ ಅವರು ನೂತನ ಕಾರ್ಯದರ್ಶಿ ಹಾಗೂ ಆಯ್ಕೆಯಾದ ಎಲ್ಲಾ ಪದಾಧಿಕಾರಿಗಳನ್ನು ಅಭಿನಂದಿಸಿದರು. ಧರ್ಮಕ್ಷೇತ್ರದಲ್ಲಿ 'ಪಾಸ್ಟೋರಲ್ ಪ್ಲಾನ್ 3.0' ಅನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಮೂಲಕ ಧರ್ಮಕ್ಷೇತ್ರ, ವಲಯ ಮತ್ತು ಚರ್ಚ್ ಹಂತದಲ್ಲಿ ವಿವಿಧ ಆಯೋಗಗಳ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕೆಂದು ಅವರು ಕರೆ ನೀಡಿದರು.

ಸಿನೋಡಲ್ ಚರ್ಚ್ ನಿರ್ಮಾಣದ ದೃಷ್ಟಿಯಿಂದ ದೇವರ ಕೃಪೆಗೆ ಆದ್ಯತೆ ನೀಡಿ, ಸಹಭಾಗಿತ್ವ, ಸಮಾಲೋಚನೆ ಮತ್ತು ಸಹಯಾತ್ರೆಯ ಮನೋಭಾವದೊಂದಿಗೆ ಕಾರ್ಯ ನಿರ್ವಹಿಸುವಂತೆ ಸಲಹೆ ನೀಡಿದ ಅವರು, ಧರ್ಮಕ್ಷೇತ್ರದ ಎಲ್ಲಾ ಆಯೋಗಗಳು ಹಾಗೂ ವಿಶ್ವಾಸಿಗಳ ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ಜೀವಂತ ಕ್ರೈಸ್ತ ಸಮುದಾಯವನ್ನು ನಿರ್ಮಿಸಬೇಕೆಂದು ಹೇಳಿದರು. ಸಭೆಯ ಕೊನೆಯಲ್ಲಿ ನೂತನ ಕಾರ್ಯದರ್ಶಿ ಜೀಟಾ ಉಷಾ ಫೆರ್ನಾಂಡಿಸ್ ವಂದನಾರ್ಪಣೆ ಸಲ್ಲಿಸಿದರು. ಬಳಿಕ ಧರ್ಮಾಧ್ಯಕ್ಷರು ಸಹಭೋಜನಕ್ಕೆ ಆಶೀರ್ವಾದ ನೀಡಿದರು. ಕಾರ್ಯಕ್ರಮವನ್ನು ವಂದನೀಯ ಫಾದರ್ ರೋಷನ್ ಡಿಕುನ್ಹಾ ನಿರೂಪಿಸಿದರು. ಮಂಗಳೂರು ಧರ್ಮಕ್ಷೇತ್ರದ ಎಲ್ಲಾ ವಲಯಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

# 'ಅಂಬೇಡ್ಕರ್ ಓದು' ಕಾರ್ಯಕ್ರಮ - ಓದಿನ ಮಹತ್ವ ಸಾರಿದ ಗಣ್ಯರು



ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಶ್ರೀ ಗೋಕರ್ಣನಾಥೇಶ್ವರ ಪದವಿ ಪೂರ್ವ ಕಾಲೇಜಿನ ಸಹಯೋಗದಲ್ಲಿ 'ಅಂಬೇಡ್ಕರ್ ಓದು' ವಿಶಿಷ್ಟ ಕಾರ್ಯಕ್ರಮವು ಕಾಲೇಜಿನ ಸಭಾಂಗಣದಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮಂಗಳೂರು ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯದ ನಿರ್ದೇಶಕ ಪ್ರೊ. ಮೋಹನ್ ಎಸ್. ಸಿಂಘೆ ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಅವರ ಸಾಧನೆಯ ಹಿಂದಿನ ಪ್ರಮುಖ ಶಕ್ತಿ ಅವರ ಓದುವ ಹವ್ಯಾಸವಾಗಿತ್ತು. ಪುಸ್ತಕಗಳು ಅತ್ಯುತ್ತಮ ಸಂಗಾತಿಗಳಾಗಿದ್ದು, ಸಾಧ್ಯವಾದಷ್ಟು ಮೂಲ ಕೃತಿಗಳನ್ನು ಓದುವ ಅಭ್ಯಾಸವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದು ಹೇಳಿದರು. ಅಂಬೇಡ್ಕರ್ ಅವರ ಛಲ, ಪರಿಶ್ರಮ ಮತ್ತು ಜ್ಞಾನಪಿಪಾಸೆ ಇಂದಿನ ಪೀಳಿಗೆಗೂ ಆದರ್ಶವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರಾಜೇಶ್ ಜಿ. ಮಾತನಾಡಿ, ನಿರಂತರ ಅಧ್ಯಯನದಿಂದ ಸಮಾಜದ ದೃಷ್ಟಿಕೋನವನ್ನು ಬದಲಾಯಿಸಬಹುದು. ಸತತ ಅಭ್ಯಾಸದಿಂದಲೇ ಅಂಬೇಡ್ಕರ್ ಅವರು ಭಾರತದ ಸಂವಿಧಾನ ರಚಿಸುವಂತಹ ಮಹತ್ತರ ಸಾಧನೆ ಮಾಡಲು ಸಾಧ್ಯವಾಯಿತು. ಇಂದಿನ ವಿದ್ಯಾರ್ಥಿಗಳು ಮೊಬೈಲ್‌ನಲ್ಲಿ ಸಮಯ ವ್ಯರ್ಥ ಮಾಡದೆ ಓದಿನತ್ತ ಹೆಚ್ಚಿನ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಸಂಚಾಲಕ ವಸಂತ್ ಕಾರಂದೂರು ಮಾತನಾಡಿ, ಅಂಬೇಡ್ಕರ್, ನಾರಾಯಣಗುರು ಹಾಗೂ ಸ್ವಾಮಿ ವಿವೇಕಾನಂದರು ಸಮಾಜ ಸುಧಾರಣೆಯ ಮಹಾನ್ ನಾಯಕರಾಗಿದ್ದು, ಅವರ ಆದರ್ಶಗಳನ್ನು ವಿದ್ಯಾರ್ಥಿಗಳು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ಕಾಲೇಜಿನ ಪ್ರಾಂಶುಪಾಲ ರಘುರಾಜ್ ಕದ್ರಿ ಮಾತನಾಡಿ, ವಿದ್ಯಾರ್ಥಿಗಳಿಗೆ ಇಂದು ದೊರೆಯುತ್ತಿರುವ ಅನೇಕ ಹಕ್ಕು ಮತ್ತು ಸೌಲಭ್ಯಗಳು ಡಾ. ಅಂಬೇಡ್ಕರ್ ಅವರ ಕೊಡುಗೆಯಾಗಿದ್ದು, ಅವರ ಜೀವನ ಸಾಧನೆ ಕುರಿತ ಪುಸ್ತಕಗಳನ್ನು ಓದುವುದು ಅವರಿಗೆ ಸಲ್ಲಿಸುವ ನಿಜವಾದ ಗೌರವ ಎಂದು ತಿಳಿಸಿದರು. ಈ ಸಂದರ್ಭದಲ್ಲಿ 'ಅಂಬೇಡ್ಕರ್ ಅವರ ಜೀವನ ಚರಿತ್ರೆ' ವಿಷಯದ ಕುರಿತು ನಡೆದ ಪ್ರಬಂಧ ಹಾಗೂ ಭಾಷಣ ಸ್ಪರ್ಧೆಗಳಲ್ಲಿ ವಿಜೇತರಾದ ಅಕ್ಷಯ್ ಕುಮಾರ್, ಪ್ರತಿಜ್ಞಾ, ದೇವಿಕಾ, ಮಧು, ಜೀವನ್ ಹಾಗೂ ದೇವಾನಂದ ಅವರಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಆಡಳಿತಾಧಿಕಾರಿ ನಾಗೇಶ್ ಕರ್ಕೇರ ಹಾಗೂ ವಿದ್ಯಾರ್ಥಿ ಸಂಘದ ನಾಯಕಿ ಜೀವಿಕಾ ಉಪಸ್ಥಿತರಿದ್ದರು. ವಸಂತ್ ಸ್ವಾಗತಿಸಿದರು. ಭಾರತಿ ವಂದಿಸಿದರು. ವನಿತಾ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.










*If not delivered please return To:*

ಕರಾವಳಿ ಸುದ್ದಿ
KARBIL/2015/62120 DAKSHINA KANNADA

Door Number 2-68/2B, Near Nithyadar Mansion, Mani Post & Village,
Bantwala Taluku - 574 253. Mob.: 8431426747

PRGI No.: KARBIL/2015/62120
Post Without Prepayment License No.: SK/WPP/PTR/208/2026-28
Postal Regd No. : PTR/150/2026-28
MANGALORE RMS
Posted on 8th August 2026

Printed by SAINT JOSEPH PRINTERS Published by ROSHAN BONIFACE MARTIS on behalf of ROSHAN BONIFACE MARTIS, printed at Dakshina Kannada and published at Door Number 2-68/2B, Near NITHYADAR MANSION, MANI POST & VILLAGE, BANTWALA TALUKU, DAKSHINA KANNADA DISTRICT, KARNATAKA - 574 253 editor ROSHAN BONIFACE MARTIS.